# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 842
ಸದಸ್ಯರ ಹೆಸರು : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 15-12-2025
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ತಗಲುವ ವೆಚ್ಚಗಳನ್ನು ರೈತರೇ ಭರಿಸುತ್ತಿದ್ದು, ಇಂಧನ ಇಲಾಖೆಯಿಂದ ವಿಧಿಸುತ್ತಿರುವ ದರಗಳು ಬಹಳ ತುಟ್ಟಿಯಾಗಿರುವುದರಿಂದ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ದಿನಾಂಕ:15.04.2025ರ ಆದೇಶದನ್ವಯ ಮತ್ತು KERC ರವರ ವಿದ್ಯುಚ್ಛಕ್ತಿ ದರ ಆದೇಶದಂತೆ 10 ಹೆಚ್. ಪಿ ಮತ್ತು 10 ಹೆಚ್. ಪಿ ಗಿಂತ ಕಡಿಮೆ ಇರುವ ಒಂದು ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಸಂದಾಯ ಮಾಡಬೇಕಾಗಿರುವ ಶುಲ್ಕಗಳು ಕೆಳಕಂಡಂತಿವೆ:<br>ಅರ್ಜಿ ಶುಲ್ಕ: ರೂ50/-+ ಜಿ ಎಸ್ ಟಿ ಮೊತ್ತ<br>ಅಭಿವೃದ್ಧಿ/ವಿದ್ಯುತ್ ಜಾಲದ ಶುಲ್ಕ: ರೂ.15,000/-<br>ಠೇವಣಿ ಶುಲ್ಕ (ಪ್ರತಿ ಹೆಚ್ ಪಿ ರಂತೆ): ರೂ.1660/-<br><br>ಮುಂದುವರೆದು, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಕೆಳಗಿನ ವಿಧಾನಗಳನ್ನು ಅನುಸರಿಸಬಹುದಾಗಿದೆ:<br>1) ಹಾಲಿ ಇರುವ LT ಜಾಲದಿಂದ ತಾಂತ್ರಿಕ ಸಾಧ್ಯತೆಯಿದ್ದಲ್ಲಿ Service Main ಮೂಲಕ ಅಥವಾ LT ಮಾರ್ಗ ವಿಸ್ತರಣೆಯೊಂದಿಗೆ ವಿದ್ಯುತ್ ಸಂಪರ್ಕ ಪಡೆಯಬಹುದಾಗಿದೆ.<br>2) ಕಡಿಮೆ ವೆಚ್ಚದಲ್ಲಿ ಪಂಪ್ ಸೆಟ್ ಗಳಿಗೆ ರೈತರು ವಿದ್ಯುತ್ ಪಡೆಯುವಂತೆ ಅನುಕೂಲ ಮಾಡಿಕೊಡಲು, ನವೀಕೃತ ಶೀಘ್ರ ಸಂಪರ್ಕ ಯೋಜನೆಯಡಿಯಲ್ಲಿ, ರೈತರು HT ಮತ್ತು LT Line ವಿಸ್ತರಣೆ ಕಾಮಗಾರಿಗಳನ್ನು ರಚಿಸಿಕೊಂಡಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಉಚಿತವಾಗಿ ಸೂಕ್ತ ಸಾಮರ್ಥ್ಯ ಪರಿವರ್ತಕವನ್ನು ಒದಗಿಸಿ, ರೈತರ 2 ಅಥವಾ ಹೆಚ್ಚಿನ ಸಂಖ್ಯೆಯ ಪಂಪ್‌ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು.<br>3) ಕುಸುಮ-ಬಿ ಯೋಜನೆಯಡಿಯಲ್ಲಿ ಶೇ. 20% ರಷ್ಟು ಮೊತ್ತವನ್ನು ಮಾತ್ರ ರೈತರು ಭರಿಸಬೇಕಾಗಿದ್ದು, stand alone/ off grid solar ಪಂಪ್ ಸೆಟ್ ಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಾಯ ಧನದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ರೈತರು ಸ್ವಯಂ-ಕಾರ್ಯನಿರ್ವಹಣೆಯಡಿ (Self-Execution) ಟಿ.ಸಿ. ಹಾಗೂ ವಿದ್ಯುತ್ ಕಂಬಗಳು ಮತ್ತು ಇತರ ಸಲಕರಣೆಗಳನ್ನು ಖರೀದಿಸಿಯೂ ಕಾಮಗಾರಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಬಹುದಾಗಿದೆ. |
| ಆ) | ಬಂದಿದ್ದಲ್ಲಿ, ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ನೀಡಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | |
| ಇ) | ರೈತರು ವಿದ್ಯುತ್ ಪರಿವರ್ತಕಗಳಿಗೆ ಅರ್ಜಿ ಸಲ್ಲಿಸಿ ಸರ್ಕಾರ ನಿಗದಿಪಡಿಸಿರುವ ಹಣವನ್ನು ಪಾವತಿ ಮಾಡಿ ವಿದ್ಯುತ್ ಪರಿವರ್ತಕಗಳಿಗಾಗಿ ಕಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/107ವಿಎಸ್‌ಸಿ/2025, ಬೆಂಗಳೂರು, ದಿನಾಂಕ:15.04.2025 ರನ್ವಯ ದಿನಾಂಕ 22.09.2023 ರ ನಂತರದಲ್ಲಿ ನೀರಾವರಿ ಪಂಪಸೆಟ್ ಗಳು ನವೀಕೃತ ಶೀಘ್ರ ಸಂಪರ್ಕ ಯೋಜನೆಯಡಿಯಲ್ಲಿ ರೈತರು ಇಚ್ಛಿಸಿದಲ್ಲಿ HT ಮತ್ತು LT Network ವಿಸ್ತರಣೆ ಕಾಮಗಾರಿಗಳನ್ನು ಸ್ವಯಂ ಕಾರ್ಯ ನಿರ್ವಹಣೆ ಅಡಿಯಲ್ಲಿ ಮೂಲಸೌಕರ್ಯ ರಚಿಸಿಕೊಳ್ಳಲಾಗುತ್ತಿದ್ದು ಮತ್ತು ವಿಸಕಂಗಳ ವೆಚ್ಚದಲ್ಲಿ ಸೂಕ್ತ ಸಾಮರ್ಥ್ಯ ಪರಿವರ್ತಕವನ್ನು 2 ಅಥವಾ ಹೆಚ್ಚಿನ |

| | | |
|---|---|---|
| ಈ) | ಬಂದಿದ್ದಲ್ಲಿ, ರೈತರ ಬೇಡಿಕೆಗೆ ಅನುಗುಣವಾಗಿ ನಿಗದಿತ ಕಾಲಾವಧಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸಂಖ್ಯೆಯ ರೈತರ ಪಂಪ್‌ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬೇಡಿಕೆಗನುಗುಣವಾಗಿ ಪರಿವರ್ತಕಗಳನ್ನು ಒದಗಿಸಲು ವಿಸಕಂಗಳಿಂದ ಯಾವುದೇ ವಿಳಂಬವಾಗದಂತೆ ಕ್ರಮವಹಿಸಲಾಗುತ್ತಿದೆ |

ಸಂಖ್ಯೆ: ಎನರ್ಜಿ 294 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

## <u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 842 ಕ್ಕೆ ಅನುಬಂಧ</u>

<u>ಹಾಲಿ ಇರುವ ವಿದ್ಯುತ್ ಜಾಲದಿಂದ ಪಂಪಸೆಟ್ ಇರುವ ದೂರವನ್ನು ಲೆಕ್ಕಿಸದೆ ಕುಸುಮ-ಬಿ ಯೋಜನೆಯಡಿಯಲ್ಲಿ ಹೊಸದಾಗಿ ನೊಂದಣಿಗೊಳ್ಳುವ ಪಂಪಸೆಟ್ ಅಳವಡಿಸಲು ತಗಲುವ ವೆಚ್ಚದ ವಿವರಗಳು:</u>

| ಕ್ರಮ ಸಂಖ್ಯೆ | ಪಂಪ್ ಸಾಮರ್ಥ್ಯ HP | ಪಂಪ್ ಮಾದರಿ | ರಾಜ್ಯ ಸರ್ಕಾರದ ಸಹಾಯಧನ 50% (ಜಿಎಸ್‌ಟಿ ಸೇರಿ) ರೂ. | ಕೇಂದ್ರ ಸರ್ಕಾರದ ಸಹಾಯಧನ 30% (ಜಿಎಸ್‌ಟಿ ಸೇರಿ) ರೂ. | ರೈತರ ವಂತಿಗೆ 20% (ಜಿಎಸ್‌ಟಿ ಸೇರಿ) ರೂ. | ಸೌರ ಪಂಪ್‌ನ ಪ್ರತಿ ಘಟಕದ ದರ (ಜಿಎಸ್‌ಟಿ ಸೇರಿ) ರೂ. |
|---|---|---|---|---|---|---|
| 1 | 3 HP | ಸರ್ಫೇಸ್ | 97972 | 54696 | 43276 | 195944 |
| 2 | | ಸಬ್‌ಮರ್ಸಿಬಲ್ | 99524 | 54696 | 44827 | 199047 |
| 3 | 5 HP | ಸರ್ಫೇಸ್ | 141993 | 84259 | 57733 | 283985 |
| 4 | | ಸಬ್‌ಮರ್ಸಿಬಲ್ | 142768 | 84259 | 58509 | 285536 |
| 5 | 7.5 HP | ಸರ್ಫೇಸ್ | 206832 | 114203 | 92628 | 413663 |
| 6 | | ಸಬ್‌ಮರ್ಸಿಬಲ್ | 196020 | 114203 | 81817 | 392040 |
| 7 | 10 HP | ಸರ್ಫೇಸ್ | 206832 | 114203 | 191983 | 513018 |
| 8 | | ಸಬ್‌ಮರ್ಸಿಬಲ್ | 196020 | 114203 | 181911 | 492134 |

| ಸಹಾಯಧನದ ವಿವರ | | |
|---|---|---|
| ರಾಜ್ಯ ಸರ್ಕಾರ - 50% | ಕೇಂದ್ರ ಸರ್ಕಾರ - 30% | ಫಲಾನುಭವಿಗಳ ವಂತಿಗೆ - 20% |